ಎಡದಂಡೆ ನಾಲೆಯ ಬಾಗೂರು ನವಿಲೆ ಸುರಂಗದ ನಿರ್ಗಮನದ ಮುಂದಿನ ಕೆಲಸಗಳನ್ನು ಏಪ್ರಿಲ್ 87ರಿಂದ ಪ್ರಾರಂಭಿಸಲಾಯಿತು.

2.

ವರ್ಷ	ಅನುದಾನ	ವೆಚ್ಚ (ಲಕ್ಷಗಳಲ್ಲಿ)
1987-88	1236.42	935.17
88-89	2000.00	822.33
89-90	2486.00	2011.36
90-91	3000.00	3059.12
91-92	4000.00	4179.15
92-93	6000.00	17118.86
93-94	8400.00	2243.31 7:93 ವರೆಗೆ
	27122.42	**21820.66**

3. ಈ ಯೋಜನೆಯನ್ನು ಮಾರ್ಚ್ 1997ರ ವೇಳೆಗೆ ಪೂರ್ಣಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಲಾಗಿದೆ.

4. ತುಮಕೂರು ಜಿಲ್ಲೆ

1. ತಿಪಟೂರು	ತಾಲ್ಲೂಕ್	24.120	ಎಕರೆಗಳು
2. ಗುಬ್ಬಿ	-"-	1,01,252	-"-
3. ಕುಣಿಗಲ್		61,099	-"-
4. ತುರುವೇಕೆರೆ		1,71,464	-"-
5. ತುಮಕೂರು		17,000	-"-
ಒಟ್ಟು		**3,20,935**	**ಎಕರೆಗಳು**

5. ಇಲ್ಲಾ

6. ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹೇಮಾವತಿ ಯೋಜನೆಯ ಬಾಗೂರು ನವಿಲೆ ಸುರಂಗದಿಂದ ರೈಲ್ವೆ ಇಲಾಖೆಯವರು ನಿರ್ವಹಿಸಬೇಕಾಗಿರುವ ಕಾಮಗಾರಿ.

664 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರದ್) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹೇಮಾವತಿ ಯೋಜನೆ (ತುಮಕೂರು ಉಪ ನಾಲೆಯ ಬಳಿಯಲ್ಲಿ ಬರುವ ಬಾಗೂರು-ನವಿಲೆ ಸುರಂಗದಿಂದ 123 ಕಿ.ಮಿ.ವರೆಗೆ ಬರುವ ಸಿ.ಡಿ. ಕಾಮಗಾರಿಗಳಲ್ಲಿ ರೈಲ್ವೆ ಇಲಾಖೆಯವರು ನಿರ್ವಹಿಸಬೇಕಾದ ಕಾಮಗಾರಿಕಗಳ ಸಂಖ್ಯೆ ಎಷ್ಟು ;

ಆ) ಈ ಪೈಕಿ ಇದುವರೆಗೆ ರೈಲ್ವೆ ಇಲಾಖೆಯವರು ಪೂರ್ಣಗೊಳಿಸಿರುವ ಕಾಮಗಾರಿಗಳ ಸಂಖ್ಯೆ ಎಷ್ಟು;

ಇ) ರೈಲ್ವೆ ಇಲಾಖೆಯಿಂದ ಅಪೂರ್ಣವಾಗರುವ ಕಾಮಗಾರಿಗಳ ಸಂಖ್ಯೆ ಎಷ್ಟು;

ಈ) ಈ (ರೈಲ್ವೆ) ಜಾಗದಲ್ಲಿ ಬರುವ ಕಾಮಗಾರಿಗಳನ್ನು ಪೂರೈಸಲು ರಾಜ್ಯ ಸರ್ಕಾರವು ಇದುವರೆವಿಗೂ ರೈಲ್ವೆ ಇಲಾಖೆಗೆ ಪಾವತಿ ಮಾಡಿರುವ ಹಣವೆಷ್ಟು;

ಉ) ರಾಜ್ಯ ಸರ್ಕಾರದವರು ರೈಲ್ವೆ ಇಲಾಖೆಗೆ ಪಾವತಿ ಮಾಡಬೇಕಾಗಿರುವ ಹಣವೆಷ್ಟು;

ಊ) ಬಾಕಿ ಇರುವ ಹಣವನ್ನು ಆದಷ್ಟು ಬೇಗ ಪಾವತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಎ) ರಾಜ್ಯ ಸರ್ಕಾರದವರು ರೈಲ್ವೆ ಇಲಾಖೆಗೆ ಹಣವನ್ನು ಕಾಲಕ್ಕೆ ಸರಿಯಾಗಿ ಪಾವತಿ ಮಾಡದೆ ಇರುವುದರಿಂದ ರೈಲ್ವೆ ಜಾಗಗಳಲ್ಲಿ ಬರುವ ಸಿ.ಡಿ.ವರ್ಕ್ಸ್ ಕಾಮಗಾರಿಗಳು ಅಪೂರ್ಣಗೊಂಡಿರುವುದು ನಿಜವೇ; ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ) ಮೂರು

ಆ) ಯಾವುದನ್ನೂ ಪೂರ್ಣಗೊಳಿಸಿರುವುದಿಲ್ಲ.

ಇ) ಮೂರು.

ಈ) ರೂ 149.62 ಲಕ್ಷಗಳು.

ಉ) ಎಲ್ಲವನ್ನೂ ಪಾವತಿಸಲಾಗಿದೆ. ಬಾಕಿಯಿರುವುದಿಲ್ಲ.

ಊ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಎ) ಇದು ನಿಜವಲ್ಲ.

ಹೇಮಾವತಿ ಯೋಜನೆಯ ಬಾಗೂರು ನವಿಲೆ ಸುರಂಗದಿಂದ 123 ಕಿ.ಮಿ.ವರೆಗೆ ಸಿ.ಡಿ.ವರ್ಕ್ಸ್.

661 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರದ್) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹೇಮಾವತಿ ಎಡದಂಡೆ ನಾಲೆ ಯೋಜನೆಯಲ್ಲಿ ಬರುವ (ತುಮಕೂರು ಉಪ ನಾಲೆಯಲ್ಲಿ) ಬಾಗೂರು-ನವಿಲೆ ಸುರಂಗ ಮಾರ್ಗದಿಂದ 123 ಕಿ.ಮಿ.ರ ವರೆಗೆ ಎಷ್ಟು ಸಿ.ಡಿ. ಕಾಮಗಾರಿಗಳು ಇರುತ್ತವೆ (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಈ ಪೈಕಿ ಎಷ್ಟು ಸಿ.ಡಿ. ವರ್ಕ್ಸ್‌ಗಳು ಪೂರ್ಣಗೊಂಡಿವೆ (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು);

ಇ) ಈ ಪೈಕಿ ಅಪೂರ್ಣವಾಗಿರುವ ಸಿ.ಡಿ. ವರ್ಕ್ಸ್‌ಗಳೆಷ್ಟು ;

ಈ) ಕೈಗೆತ್ತಿಕೊಳ್ಳದೆ ಬಾಕಿ ಇರುವ ಸಿ.ಡಿ. ವರ್ಕ್ಸ್‌ಗಳೆಷ್ಟು; (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಉ) ಸಿ.ಡಿ. ವರ್ಕ್ಸ್‌ಗಳಿಗೆ ಇದುವರೆಗೆ ವಿಚ್ರ್ಯ ಮಾಡಿರುವ ಹಣವೆಷ್ಟು;

ಊ) ಬಾಕಿ ಇರುವ ಸಿ ಡಿ ವರ್ಕ್ಸ್‌ಗಳನ್ನು ಪೂರ್ಣಗೊಳಿಸಲು ಅಗತ್ಯವಿರುವ ಹಣವೆಷ್ಟು;

ಎ) ಸಿ ಡಿ ವರ್ಕ್ಸ್‌ಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಕಾಶ ಎಷ್ಟು;

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ) 253 ಸಿ.ಡಿ. ಕಾಮಗಾರಿಗಳು ಇರುತ್ತದೆ. ಚನ್ನರಾಯಪಟ್ಟಣ 13, ತಿಪಟೂರು 90, ತುರುವೇಕೆರೆ 28, ಗುಬ್ಬಿ 110, ತುಮಕೂರು 12.

ಆ) 66 ಸಿ.ಡಿ. ಕಾಮಗಾರಿಗಳು ಪೂರ್ಣಗೊಂಡಿವೆ. ಚನ್ನರಾಯಪಟ್ಟಣ 4, ತಿಪಟೂರು 31, ತುರುವೇಕೆರೆ 7, ಗುಬ್ಬಿ 24.

ಇ) 117 ಸಿ.ಡಿ. ಕಾಮಗಾರಿಗಳು

ಈ) 70 ಸಿ.ಡಿ. ಕಾಮಗಾರಿಗಳು,